International Journal of Kannada Research 2021; 7(3): 79-83

International Journal of Kannada Research
www.kannadajournal.com

ISSN: 2454–5813
IJKR 2021; 7(3): 79-83
© 2021 IJKR
www.kannadajournal.com
Received: 20-04-2021
Accepted: 05-06-2021

**Dhananjaya Murthy GN**
Assistant Professor of Kannada, GFGC, Koppa, Chikkamagaluru Dist, Kuvempu University, Shivamogga, Karnataka, India

**Corresponding Author:**
**Dhananjaya Murthy GN**
Assistant Professor of Kannada, GFGC, Koppa, Chikkamagaluru Dist, Kuvempu University, Shivamogga, Karnataka, India

# ಜಿ.ರಾಜಶೇಖರ್ ರವರ ಚಿಂತನೆಗಳಲ್ಲಿ ಕೋಮುವಾದದ ವಿರೋಧಿ ನೆಲೆಗಳು

**Dhananjaya Murthy GN**

ಕನ್ನಡ ಮನಸ್ಸು ಬಹಳಷ್ಟು ಸಂದಿಗ್ಧಸ್ಥಿತಿಗಳಲ್ಲಿಯೂ ತನ್ನ ಅರಿವು ಮತ್ತು ಪ್ರಜ್ಞೆಗಳನ್ನು ಬಿಟ್ಟುಕೊಡದೆ ಸಮಾಜದ ಆಗುಹೋಗುಗಳಿಗೆ ವೈಚಾರಿಕವಾಗಿ ಮುಖಾಮುಖಿಯಾಗಿರುವುದು ಅದರ ಚಾರಿತ್ರಿಕ ಹಿನ್ನೆಲೆಯನ್ನು ನೋಡಿದಾಗ ಗೊತ್ತಾಗುತ್ತದೆ. ಆಧುನಿಕ ಭಾರತೀಯ ಸಮಾಜ ಬೇರೆ ಬೇರೆ ಸ್ಥಿತ್ಯಂತರಗಳ ಪ್ರಭಾವಕ್ಕೆ ಒಳಗಾದಾಗ ಕನ್ನಡ ಮನಸ್ಸು ಅದಕ್ಕೆ ಕ್ರಿಯಾತ್ಮಕವಾಗಿ ಅಷ್ಟೆ ಅಲ್ಲದೆ ರಚನಾತ್ಮಕವಾಗಿಯೂ ಎದುರುಗೊಂಡಿದೆ. ಸ್ವಾತಂತ್ರ್ಯೋತ್ತರ ಭಾರತ ದೇಶವಿಭಜನೆಯ ಸಮಸ್ಯೆ, ಕಾಶ್ಮೀರಿ ಸಮಸ್ಯೆ, ಮತೀಯವಾದ, ಬಡತನ, ನಿರುದ್ಯೋಗ, ಜಾಗತೀಕರಣ, ಖಾಸಗಿಕರಣ, ಅಸಮಾನತೆ ಮುಂತಾದ ಹಲವು ವೈರುಧ್ಯಗಳನ್ನು ಎದುರಿಸುತ್ತಿರುವಾಗ ಈ ವಿಚಾರಗಳನ್ನು ಇಟ್ಟುಕೊಂಡು ಚಿಂತಿಸಿದ ಹಲವು ಲೇಖಕರಲ್ಲಿ ಜಿ.ರಾಜಶೇಖರ್ ರವರೂ ಒಬ್ಬರು. ಮೊದಲು ಶಿಕ್ಷಕರಾಗಿ ತದನಂತರ ಎಲ್.ಐ.ಸಿಯಲ್ಲಿ ಸೇವೆ ಮಾಡಿದ ಇವರು ಕೋಮುಸೌಹಾರ್ಧತೆಗಾಗಿ ದುಡಿದವರು. ನಮ್ಮ ನಡುವಿನ ಪ್ರಖರ ತಾತ್ತ್ವಿಕ ಚಿಂತಕರೂ ಮತ್ತು ಸಾಹಿತ್ಯ ವಿಮರ್ಶಕರೂ ಆಗಿರುವ ಇವರು ವರ್ತಮಾನದ ಬಿಕ್ಕಟ್ಟುಗಳಿಗೆ ಸ್ಪಂದಿಸಿ ಬರೆದಿದ್ದಾರೆ. 'ಕಾಗೋಡು ಸತ್ಯಾಗ್ರಹ', 'ಬಹುವಚನ ಭಾರತ' 'ದಾರು ಪ್ರತಿಮಾನ ಪೂಜಿವೆ', 'ಪರಿಸರ ಮತ್ತು ಸಮಾಜವಾದ' ಇವರ ಕೆಲವು ಪ್ರಮುಖ ಕೃತಿಗಳು. ಪ್ರಸ್ತುತ ಲೇಖನ ಅವರ ಬರೆಹಗಳ ಒಟ್ಟಾರೆ ಆಶಯಗಳಲ್ಲಿ ಕೋಮುವಾದವನ್ನು ಹೇಗೆ ಎದುರುಗೊಂಡಿದೆ? ಎಂಬುದನ್ನು ಕುರಿತಂತೆ ಅವರ ನಿಲುವುಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.

ಜಿ.ರಾಜಶೇಖರ್ ರವರು ಸಾಹಿತಿಯಾಗಬೇಕೆಂದು ಬರೆದವರಲ್ಲ, ಬದಲಿಗೆ ದೇಶದೊಳಗಿನ ಬಗೆಬಗೆಯ ಹಿಂಸೆಗಳು ಮತ್ತು ಕ್ರೌರ್ಯಗಳು ಅವರನ್ನು ಬರೆಯುವಂತೆ ಪ್ರೇರೇಪಿಸಿದವು. ಈ ಕಾರಣಕ್ಕಾಗಿಯೆ ಅವರ ಬರೆಹಗಳು ಸಂಗ್ರಹಿತ ರೂಪದಲ್ಲಿ ಇದೂ ವರೆವಿಗೂ ಬಂದಿರಲಿಲ್ಲ.(ಅಭಿನವ ೨೦೧೫ ರಲ್ಲಿ ಅನಂತಮೂರ್ತಿಯವರ ಗೌರವ ಮಾಲಿಕೆಯಲ್ಲಿ "ಬಹುವಚನ ಭಾರತ" ವನ್ನು ಮುದ್ರಿಸಿ–ದೆ.

ಅವರ "ಕಾಗೋಡು ಸತ್ಯಾಗ್ರಹ" ಒಮ್ಮೆ ಅಚ್ಚಾದದ್ದು ಈಗ ಅಲಭ್ಯ). ಪ್ರಾರಂಭದಲ್ಲಿ ಶಿವರಾಮ ಕಾರಂತರ ಕಾದಂಬರಿಗಳಿಂದ ಪ್ರಭಾವಿತರಾದ ಇವರು ಲಂಕೇಶರವರ ಬರೆವಣಿಗೆಯ ನಿಖರತೆಯನ್ನು ನಂಬುತ್ತಾರೆ. ಕನ್ನಡ ಹಾಗೂ ಇಂಗ್ಲೀಷಿನ ಅಗಾಧ ಓದಿನ ವ್ಯುತ್ಪತ್ತಿಯ ಮೂಲಕ ತಮ್ಮ ಚಿಂತನೆಗಳನ್ನು ರೂಪಿಸಿಕೊಂಡು, "ಸಾದತ್ ಹಸನ್ ಮಂಟೋನ ಜೊತೆ ಬ್ರೆಕ್ಟ್, ಕಾಫ್ಕರನ್ನೂ ಓದಬೇಕು ಇಲ್ಲವಾದರೆ ನಮಗೆ ಮಂಟೋ ಅರ್ಥವಾಗುವುದಿಲ್ಲ" ('ನ್ಯಾಯ ನಿಷ್ಠುರಿಗಳ ಜತೆಯಲ್ಲಿ' ಪುಟ:೫೦) ಎಂದು ಹೇಳುವುದರಲ್ಲಿ ಕೋಮುವಾದಕ್ಕೆ ಸಂಬಂಧಪಟ್ಟಂತೆ ಅವರಿಗಿರುವ ಖಚಿತ ನಿಲುವುಗಳನ್ನು ಧೃಡಪಡಿಸುತ್ತದೆ. ಈ ಮುವರೂ ಚಿಂತಕರು ಹಿಂಸೆ ಮತ್ತು ಕ್ರೌರ್ಯವನ್ನು ಕುರಿತು ಆಳವಾಗಿ ಚಿಂತಿಸಿದವರು. ಹಾಗಾದರೆ ರಾಜಶೇಖರ್ ರವರು ಹಿಂಸೆಯನ್ನು ಹೇಗೆ ಪ್ರತಿರೋಧಿಸುತ್ತಾರೆ? ಹಾಗೂ ಈ ಹಿಂಸೆಗಳಿಗೆ ಯಾವ ಕಾರಣಗಳನ್ನು ಹುಡುಕುತ್ತಾರೆ ಎಂಬುದು ತುಂಬಾ ಮುಖ್ಯವಾದುದು. ಈ ಹಿಂಸೆ ಮತ್ತು ಕ್ರೌರ್ಯದ ಬಗ್ಗೆ ಹೇಳುವ ಕಲಾವಿದ ತಾನು ಬಳಸುವ ಮಾಧ್ಯಮವನ್ನು ಆದಷ್ಟು ಸರಳಗೊಳಿಸಿಕೊಳ್ಳಬೇಕು ಎಂಬುದು ಅವರ ಅಭಿಪ್ರಾಯ. ಆದ್ದರಿಂದ ಸಾಹಿತಿ ತನ್ನ ಮಾಧ್ಯಮವಾದ ಬರೆವಣಿಗೆಯ ಭಾಷೆಯನ್ನು ಸರಳಗೊಳಿಸಿಕೊಳ್ಳಬೇಕು ಎನ್ನುತ್ತಾರೆ. ಈ ನಿಟ್ಟಿನಲ್ಲಿ "ನಾವು ಬರೆಯುವ ಬರೆವಣಿಗೆಯ ಭಾಷೆಯು ಹತ್ತನೆ ತರಗತಿ ಫೇಲಾದವರಿಗೂ ಅರ್ಥವಾಗುವಂತಿರಬೇಕು" ('ಬಹುವಚನ ಭಾರತ', ಪುಟ:೮) ಎಂಬ ಅವರ ಆಶಯ, ಸಾಹಿತ್ಯ ಕಠಿಣ ಪದಗಳ ಪಾರಿಭಾಷಿಕಗಳ ಸರಮಾಲೆಯಾಗದೆ ಸಾಮಾನ್ಯರನ್ನೂ ತಲುಪಬೇಕೆಂಬುದರ ಬಗೆಗಿನ ಅವರಿಗಿರುವ ಬದ್ಧತೆ ಮತ್ತು ಕಾಳಜಿಯನ್ನು ಹೇಳುತ್ತದೆ. ಲಂಕೇಶರವರು ತಮ್ಮ ಕೊನೆಯ ದಿನಗಳಲ್ಲಿ ರಾಜಶೇಖರ್ ರವರ ಭಾಷೆಯನ್ನು ಕುರಿತು ಬರೆದ ವಿಷಯವನ್ನು ಇಲ್ಲಿ ಪ್ರಾಸಂಗಿಕವಾಗಿ ಸ್ಮರಿಸಬಹುದು.('ನ್ಯಾಯ ನಿಷ್ಠುರಿಗಳ ಜತೆಯಲ್ಲಿ',ಪುಟ:೨೯)

ಸಾಹಿತ್ಯವನ್ನು ಗಂಭೀರ ವಿಮರ್ಶೆಗೆ ಒಳಪಡಿಸಿದ ಕೆಲವೆ ಜನ ಚಿಂತಕರಲ್ಲಿ ಒಬ್ಬರು. ಸಾಹಿತ್ಯ ವಿಮರ್ಶೆ, ಸಂಸ್ಕೃತಿ, ಜಾಗತೀಕರಣ, ಕೋಮುವಾದ, ಅಸಮಾನತೆಗಳನ್ನು ಕುರಿತು ರಾಜಶೇಖರ್ ರವರ ವಿಚಾರಧಾರೆಗಳು ಮೌಲ್ಯಯುತವಾದವುಗಳಾಗಿವೆ. ಆದರೆ ರಾಜಶೇಖರ್ ರವರನ್ನು ತೀವ್ರವಾಗಿ ಕಾಡಿರುವುದು ಮತೀಯ ಹಿಂಸೆ. ಭಾರತದಲ್ಲಿ ಹಿಂದೂ ಮುಸ್ಲಿಂ ಸಂಘರ್ಷಗಳ ಬೀಜಗಳು ವಸಾಹತುಶಾಹಿಗಳ ಕುತಂತ್ರರಾಜಕಾರಣದಲ್ಲಿ ೧೮೫೭ರಿಂದಲೂ ಕಂಡುಬಂದಿದ್ದವು. ವಸಾಹತುಶಾಹಿಗಳ ಹಿಡಿತದಲ್ಲಿನ ಭಾರತ ಸ್ವಾತಂತ್ರ್ಯವಾಗಿ ದೇಶ ವಿಭಜನೆಗೊಂಡ ಮೇಲೆ ಇಲ್ಲಿನ ಅಧಿಕಾರ ರಾಜಕಾರಣ ಭಾರತದ ಒಳಗೆ ಬದುಕುತ್ತಿರುವ ಜನರು ಮಾನಸಿಕವಾಗಿ ಇಬ್ಭಾಗವಾಗುವಂತೆ ನೋಡಿಕೊಂಡಿತು. ಇದಕ್ಕೆ ೧೯೯೨ರ ಬಾಬರಿ ಮಸೀದಿ ನೆಲಸಮದ ಪ್ರಕರಣ, ೨೦೦೨ರ ಗೋಧ್ರಾ ಹತ್ಯಾಕಾಂಡ, ಮುಂತಾದ ಕೋಮುಹಿಂಸೆಗಳು ಇಂಬು ನೀಡಿದವು. ಒಂದೇ ದೇಶದೊಳಗೆ ಬದುಕುತ್ತಿರುವ ಜನರನ್ನು ಇಲ್ಲಿನ ರಾಜಕಾರಣ ಆಂತರ್ಯದಲ್ಲಿ ಹೊಡೆದು ಆಳುವ "ನಾವು" ಮತ್ತು "ಅವರು" ಎಂಬ ಕಂದಕಗಳನ್ನು ನಿರ್ಮಾಣ ಮಾಡಿತು. 'ನಾವು' ಮತ್ತು 'ಅವರು' ಎನ್ನುವ ತರದ ಅಸಂಖ್ಯ ಶಬ್ಧಗಳು ಕೋಮುವಾದದ ನಿಘಂಟಿನಲ್ಲಿವೆ. ಕೋಮುವಾದ ಸಂಕಥನಗಳ ರೂಪದಲ್ಲಿ ಬಳಸುವ ಈ ಎರಡು ಪಾರಿಭಾಷಿಕಗಳನ್ನು ರಾಜಶೇಖರ್ ರವರು ತುಂಬಾ ಸೂಕ್ಷ್ಮವಾಗಿ ಬಿಡಿಸುತ್ತಾರೆ. ಅವರು ಹೇಳುವಂತೆ "ಇಲ್ಲಿ 'ನಾವು' ಎಂದರೆ ನನ್ನ ಮತದ ಎಲ್ಲ ಜನ. 'ಅವರು' ಎಂದರೆ ಆ ಇನ್ನೊಂದು ಮತದ ಜನ". ('ಬಹುವಚನ ಭಾರತ', ಪುಟ- ೯೦) ಆ ಇನ್ನೊಂದು ಮತದಲ್ಲಿರುವ ದೋಷಗಳನ್ನು ಮಾತ್ರ ನಿಷ್ಠುರ ವಿಮರ್ಶೆಗೆ ಒಳಪಡಿಸುತ್ತದೆ. ಆದರೆ ತನ್ನ ಮತದಲ್ಲಿರುವ ಸಾಮಾಜಿಕವೂ ಸೇರಿದಂತೆ ಎಲ್ಲ ಕ್ಷೇತ್ರಗಳ ಅಸಮಾನತೆಯನ್ನು ಅದು ಒಪ್ಪಿಕೊಳ್ಳುವುದಿಲ್ಲ. ಬದಲಿಗೆ ಅಲ್ಲಗಳೆಯುತ್ತದೆ. ಹೀಗೆ ಮನುಷ್ಯಜೀವಿಗಳ ನಡುವೆಯೆ ಗೋಡೆಗಳನ್ನು ನಿರ್ಮಿಸಿ ನಾವು ಮತ್ತು ಅವರು ಎನ್ನುವ ಒಡಕಿನ ಪದಗಳನ್ನು ಕೋಮುವಾದಿ ಮನಸ್ಥಿತಿಗೆ ಬೇಕಾದ ಹಾಗೆ ವಿನ್ಯಾಸಪಡಿಸಿಕೊಂಡು ತನ್ನ ಹಿತಾಸಕ್ತಿಯನ್ನು ಅದು ಈಡೇರಿಸಿಕೊಳ್ಳುತ್ತದೆ. ಅದು ಎಂದಿಗೂ ಎಲ್ಲ ಧರ್ಮದ ಜಾತಿಯ ಜನರು ಒಂದೆಡೆ ಕಲೆತು ಬಾಳುವುದನ್ನು ಸಹಿಸುವುದಿಲ್ಲ. ಇದನ್ನು ರಾಜಶೇಖರ್ ರವರು ಸ್ಪಷ್ಟವಾಗಿ ಮನಗಂಡಿದ್ದಾರೆ.

ಇನ್ನೂ ಮುಂದೆ ಹೋಗಿ ನಮ್ಮನ್ನಾಳುವ ಪಕ್ಷಗಳು ಈ ನಿಟ್ಟಿನಲ್ಲಿ ತಳೆಯುವ ಗೋಸುಂಬೆತನವನ್ನು ರಾಜಶೇಖರ್ ರವರು ಬಯಲುಮಾಡುತ್ತಾರೆ. ಭಾರತವನ್ನು ಆಳಿರುವ

ಬಹುತೇಕ ಪಕ್ಷಗಳಲ್ಲಿ ಜಾತ್ಯತೀತತೆ, ಸಮಾಜವಾದ, ಧರ್ಮಾತೀತ ಗುಣಗಳು ಸತ್ತು ಹೋಗಿರುವುದನ್ನು ಅವರು ಗ್ರಹಿಸಿದ್ದಾರೆ. ಉದಾಹರಣೆಗೆ ಭಾರತದಲ್ಲಿ ಸಂಭವಿಸಿದ ಬಾಬರಿ ಮಸೀದಿ ಧ್ವಂಸ ಪ್ರಕರಣ, ಗೋದ್ರಾ ಹತ್ಯಾಕಾಂಡ, ಮುಂಬೈ ಗಲಭೆ, ಬಾಬಾ ಬುಡನ್ ಗಿರಿ ವಿವಾದಗಳೂ ಸೇರಿದಂತೆ ಬೇರೆ ಬೇರೆ ಕೋಮು ಹಿಂಸೆಗಳು ಜರುಗಿದ ಹಲವು ಸಂದರ್ಭಗಳಲ್ಲಿ, ಭಾರತೀಯ ಸ್ವಾತಂತ್ರ್ಯ ಚಳವಳಿಯ ಮುಖ್ಯ ಭೂಮಿಕೆಯಲ್ಲಿ ನಿಂತು ಕೆಲಸ ಮಾಡಿದ್ದ ಪಕ್ಷವೆ ಅಧಿಕಾರದಲ್ಲಿದ್ದೂ ಅದು ನಿರ್ಲಿಪ್ತವಾಗಿದ್ದನ್ನು ಈ ಹಿನ್ನೆಲೆಯಲ್ಲಿ ನೋಡಬಹುದಾಗಿದೆ. ('ಕೋಮುವಾದದ ಕರಾಳ ಮುಖಗಳು' ಪು–೨೦) ಹಿಂಸೆ ಮತ್ತು ರಕ್ತಪಾತಗಳ ಸಂದರ್ಭದಲ್ಲಿ ಪ್ರಭುತ್ವವೊಂದು ಮೌನವಾಗಿರುವುದನ್ನು ಅದರ ಪ್ರಚೋದನೆ ಎಂದೇ ಭಾವಿಸಬೇಕಾಗುತ್ತದೆ. ಆದ್ದರಿಂದ ಭಾರತವನ್ನು ಆಳುವ ಪ್ರಧಾನ ಪಕ್ಷಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಒತ್ತಟ್ಟಿಗಿರಲಿ, ಮಾನವೀಯತೆಯೆ ಮೊಟಕುಗೊಂಡಿರುವುದನ್ನು ವಿಷಾದದಿಂದಲೆ ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿನ ಕೋಮುವಾದ ಗತಕಾಲದಲ್ಲಿನ ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ವರ್ತಮಾನದ ಜನಜೀವನವನ್ನು ಅಪಾಯದ ಕೂಪಕ್ಕೆ ತಳ್ಳುತ್ತಿದೆ. ಉದಾಹರಣೆಗೆ ಘಜ್ನಿ ಘೋರಿಯರ ಧ್ವಂಸಕೃತ್ಯಗಳನ್ನು ಪುನಃ ಪುನಃ ಅದು ನೆನಪಿಸಿ ಆ ಮೂಲಕ ಹಿಂದೂಗಳು ಅಪಾಯದಲ್ಲಿದ್ದೇವೆ ಎಂಬ ಹುಸಿ ಭ್ರಮೆಯನ್ನು ಹುಟ್ಟಿಸುತ್ತದೆ. ಮೊಘಲರ ಕಾಲದಲ್ಲಿ ಔರಂಗಜೇಬ, ತೊಘಲಕ್ ರ ದುರಾಡಳಿತದಿಂದಾದ ಪರಿಣಾಮಗಳನ್ನು ಬಣ್ಣಬಣ್ಣದ ಕತೆಗಳ ಮೂಲಕ ತನಗೆಬೇಕಾದ ಸಿದ್ಧಾಂತವನ್ನು ಸಾದರಪಡಿಸುತ್ತದೆ. ಆದರೆ ಉಪನಿಷತ್ತು ಗಳನ್ನು ಹಾಗೂ ಭಗವದ್ಗೀತೆಯನ್ನು ಪರ್ಷಿಯನ್ ಭಾಷೆಗೆ ತರ್ಜುಮೆ ಮಾಡಿದ ದಾರಶಿಕೊ, 'ಕಿತಾಬ್ ಎ ನವರಸ್' ಕೃತಿಯಲ್ಲಿ ಗಣಪತಿ ಮತ್ತು ಸರಸ್ವತಿಯನ್ನು ಸ್ಮರಿಸಿದ ಇಬ್ರಾಹಿಂ ಆದಿಲ್ಶಾಹಿಯರ ಧರ್ಮನಿರಪೇಕ್ಷ ಗುಣವನ್ನು ಉದ್ದಿಶ್ಯವಾಗಿ ಮರೆಮಾಚುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಟಿಪ್ಪುವನ್ನು ಅದು ಮತಾಂಧನನ್ನಾಗಿ ಮಾತ್ರ ಚಿತ್ರಿಸಲು ಹಾತೊರೆಯುತ್ತದೆ. ಅವನು ಶೃಂಗೇರಿ ಮಠಕ್ಕೆ ನೀಡುತ್ತಿದ್ದ ಬೆಂಬಲವನ್ನೂ, ಅವನ ಆಸ್ಥಾನದಲ್ಲಿ ನೇಮಕಗೊಂಡಿದ್ದ ಹಿಂದೂ ಅಧಿಕಾರಿಗಳನ್ನೂ, ವಿವಿಧ ಹಿಂದೂ ದೇವಾಲಯಗಳಿಗೆ ಅವನು ಕೊಡುತ್ತಿದ್ದ ದತ್ತಿಯನ್ನೂ ಮೇಲಾಗಿ ದೇಶವನ್ನು ವಸಾಹತುಶಾಹಿಗಳ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಅವನ ಶ್ರಮದ ಪ್ರಾಮಾಣಿಕತೆಯನ್ನು ತೆರೆಮರೆಗೆ ಸರಿಸುವ ಕುಟಿಲಯತ್ನಗಳನ್ನು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ರಾಜಶೇಖರ್ ರವರ ಚಿಂತನೆ ಸ್ಪಷ್ಟವಾಗಿದೆ. ಅದಕ್ಕೆ ಅವರು ಹೇಳುತ್ತಾರೆ: "ನಮ್ಮಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ ಇಲ್ಲಿನ ಬಹುಸಂಖ್ಯಾತ ಪ್ರಜೆಗಳ ಹಿಂದೂ ಧರ್ಮ ಮಾನವೀಯಗೊಳ್ಳದೆ ಅದು ನೆಲೆಗೊಳ್ಳಲು ಸಾಧ್ಯವಿಲ್ಲ" ('ಬಹುವಚನ ಭಾರತ',ಪು–೭೪) ಎನ್ನುತ್ತಾರೆ. ಈ ಸತ್ಯವನ್ನು ಗಾಂಧಿ, ನೆಹರೂ, ಅಂಬೇಡ್ಕರ್ ಮನಗಂಡಿದ್ದೂ ರಾಜಶೇಖರ್ ರವರಿಗೆ ಗೊತ್ತಿದೆ.

ಭಾರತದ ಇತಿಹಾಸವನ್ನು ಓದುವಾಗ ಮತಾಂಧರಿದ್ದರೂ ಅದುವೆ ಅವರ ಪ್ರಧಾನ ಬದುಕಾಗಿರಲಿಲ್ಲ. ಹಾಗಿದ್ದಿದ್ದರೆ ಕ್ರೈಸ್ತರೆ ಆಗಿದ್ದ ಫ್ರೆಂಚರು ಇಂಗ್ಲೀಷರ ನಡುವಿನ ಕಾಳಗಗಳು, ಮುಸ್ಲಿಮರಾಗಿದ್ದ ಹೈದರಬಾದಿನ ನಿಜಾಮರು ಮತ್ತು ಟಿಪ್ಪು ನಡುವಿನ ಸೆಣಸಾಟಗಳು ಯಾಕೆ ನಡೆಯಬೇಕಿತ್ತು? ಬ್ರಾಹ್ಮಣರಾಗಿದ್ದ ಪೇಶ್ವೆಗಳು ಬ್ರಾಹ್ಮಣ ಮಠವನ್ನೆ ಏಕೆ ಲೂಟಿ ಮಾಡುತ್ತಿದ್ದರು? ಈ ಎಲ್ಲ ಸಂಗತಿಗಳು ಆಯಾ ಕಾಲದ ಚಾರಿತ್ರಿಕ ಒತ್ತಡಗಳಾಗಿ ಪರಿಣಮಿಸಿದವುಗಳಷ್ಟೆ. ಇದೆಲ್ಲವನ್ನೂ ತನ್ನ ಸಿದ್ಧಾಂತಗಳಿಂದ ದೂರ ಇಟ್ಟಿರುವ ಕೋಮುವಾದ ಗುಣಾತ್ಮಕ ಅಂಶಗಳನ್ನು ನಿರಾಕರಿಸಿ ತನಗೆ ಒಗ್ಗುವ ನೇತ್ಯಾತ್ಮಕ ವಿಚಾರಗಳನ್ನು ಮಾತ್ರ ಮುನ್ನೆಲೆಗೆ ತರುತ್ತದೆ.

ರಾಜಶೇಖರ್ ರವರು ಗುರುತಿಸುವಂತೆ "ಸ್ವತಂತ್ರ ಭಾರತದ ಎರಡು ದೊಡ್ಡ ದುರಂತಗಳು ಹಿಂದೂ ಕೋಮುವಾದದ ಫಲಗಳಾಗಿವೆ. ಒಂದು: ೧೯೪೮ರಲ್ಲಿ ಅಪ್ಪಟ ಹಿಂದೂ ಆಗಿದ್ದ 'ಮಹಾತ್ಮಗಾಂಧಿ'ಯ ಕೊಲೆಯಾದರೆ, ಎರಡನೆಯದು ೧೯೯೨ ರಲ್ಲಿ ನಡೆದ ಬಾಬರಿ ಮಸೀದಿ ಧ್ವಂಸ".('ಬಹುವಚನ ಭಾರತ',ಪು–೪೯) ಮೊದಲನೆಯದು ಭಾರತೀಯರಲ್ಲಿ ಧರ್ಮನಿರಪೇಕ್ಷತೆಯನ್ನು ಬೆಳೆಸಲು ಎಣಗಿ ತಮ್ಮ ಜೀವನವನ್ನೆ ಕೋಮುಸೌಹಾರ್ದತೆಗಾಗಿ ಮಡಿಪು ಇರಿಸಿದವರ ಕೊಲೆಯಾದರೆ, ಎರಡನೆಯದು ಅಲ್ಪಸಂಖ್ಯಾತರ ಸಾಂಸ್ಕೃತಿಕ ನೆನಪುಗಳನ್ನು ಸಮಾಧಿ ಮಾಡುವುದಾಗಿದೆ. ಹಿಂದೂ ಕೋಮುವಾದಕ್ಕೆ ಮುಸ್ಲಿಂರೆ

ಗುರಿಯಾಗಿದ್ದರೂ, ಅದರ ದುಷ್ಪರಿಣಾಮಗಳನ್ನು ಹಿಂದೂಗಳೂ ಅನುಭವಿಸಿದ್ದಾರೆ, ಅಂದರೆ ಕೋಮುವಾದದ ನೈಜ ಕಾಳಜಿ ಅಡಗಿರುವುದು ಅದರ ಜೀವವಿರೋಧಿ ನೆಲೆಯಲ್ಲಿ ಎಂಬುದು ನಮಗೆ ಮನದಟ್ಟಾಗುತ್ತದೆ. ಕೋಮುವಾದ 'ಮನೆಯೊಳಗಿನ ಬೆಂಕಿ ಮನೆಯ ಸುಟ್ಟುದಲ್ಲದೆ ನೆರೆಮನೆ ಬೇಹುದೆ?' ಎಂಬ ಆತ್ಮವಲೋಕನಕ್ಕೆ ಓಗೊಡುವುದೆ ಇಲ್ಲ. ಏಕೆಂದರೆ ಅದು ಹೆಣಗಳ ಮೇಲೆ ತನ್ನ ಭವ್ಯ ಸೌಧವನ್ನು ನಿರ್ಮಿಸುತ್ತದೆ. ಇದು ನಮಗೆ ಮನದಟ್ಟಾಗಬೇಕೆಂದರೆ ರಾಜಶೇಖರ್ ರವರು ಕೊಡುವ ಅಂಕಿ–ಅಂಶಗಳನ್ನು ಮುಂದಿನಂತೆ ಅವಲೋಕಿಸಬಹುದು.

೧೯೯೨ ಡಿಸೆಂಬರ್ ೬ ರಂದು ಬಾಬರಿ ಮಸೀದಿ ಧ್ವಂಸವಾಗಿ ಅದರ ಬೆನ್ನಲ್ಲೆ ಮುಂಬೈನಲ್ಲಿ ನಡೆದ ಕೋಮುಗಲಭೆಗಳಲ್ಲಿ ೯೦೦ ಜನ ಪ್ರಾಣ ಕಳೆದುಕೊಂಡು ೨೦೩೬ ಜನ ಗಾಯಗೊಂಡರು. ಸತ್ತವರಲ್ಲಿ ೫೭೫ ಮುಸ್ಲಿಮರು, ೨೯೫ ಹಿಂದೂಗಳು. ಗಾಯಗೊಂಡವರಲ್ಲಿ ೧೧೦೫ ಮುಸ್ಲಿಮರು, ೮೯೩ ಹಿಂದೂಗಳು. ಗೋದ್ರಾ ದುರ್ಘಟನೆಯ ವಿರುದ್ಧ ವಿಹಿಂಪ ಕರೆಕೊಟ್ಟ ಬಂದ್ ನಲ್ಲಿ ಬೆಸ್ಟ್ ಬೇಕರಿ ಪ್ರಕರಣ ನಡೆಯಿತು. ೧೦೦೦ ಜನರಿದ್ದ ಗುಂಪೊಂದು ಬೆಸ್ಟ್ ಬೇಕರಿಯ ಮೇಲೆ ಹಠಾತ್ತನೆ ದಾಳಿ ಮಾಡಿತು. ಬೇಕರಿಯ ಮಾಲೀಕ ಹಬೀಬುಲ್ಲ ಶೇಕ್ ನ ಕುಟುಂಬದ ೧೧ ಜನ ಮತ್ತು ಬೇಕರಿಯ ಕೆಲಸಕ್ಕಿದ್ದ ೩ ಜನ ಈ ದಾಳಿಯಲ್ಲಿ ಕೊಲ್ಲಲ್ಪಟ್ಟರು. ಇದರಲ್ಲಿ ಬಲಿಯಾದವರು ಮುವರು ಮಕ್ಕಳು ಮತ್ತು ಮುವರು ಹಿಂದೂಗಳು. ಈ ರಕ್ತಪಿಪಾಸುಗುಣ ಕೋಮುವಾದದ ಮುಖ್ಯಹಂದರ. ಮುಂಬೈಗಲಭೆಗಳಿಗೆ ಸಂಬಂಧಿಸಿದ ಬಿ.ಎನ್.ಶ್ರೀಕೃಷ್ಣರವರ ವರಧಿಯಲ್ಲಿನ ಅಂಶಗಳು ಸಾದತ್ ಹಸನ್ ಮಂಟೋನ ಕತೆಗಳಿಗೆ ಹೋಲಿಕೆಯಾಗುತ್ತವೆ ಎಂಬುದನ್ನು ರಾಜಶೇಖರ್ರವರು ವಿಷಾದದಿಂದ ಹೇಳುವುದು ಸಮರ್ಪಕವಾಗಿದೆ. ಮಂಟೋ ದೇಶವಿಭಜನೆಯ ಕ್ರೂರ ಹಿಂಸೆಯಲ್ಲಿ ಬೆಂದು ಕೊನೆಗೆ ಯಾವ ದೇಶಕ್ಕೂ ಸೇರಲು ಇಷ್ಟಪಡಲಿಲ್ಲ. ದೆಹಲಿ, ಅಮೃತಸರ, ಲಾಹೋರ್ಗಳಲ್ಲಿ ನಡೆದ ಮತೀಯ ಹಿಂಸೆಗಳು ಅವನನ್ನು ಜರ್ಜರಿತನನ್ನಾಗಿ ಮಾಡಿದ್ದವು. ಕತೆಯಲ್ಲಿ ಕಟ್ಟಲು ಕಷ್ಟವಾಗುವ, ಸಿನಮೀಯಕ್ಕೂ ಮೀರಿದ ದುರಂತ ಕತೆಗಳ ಅವಾಂತರಗಳನ್ನು ಕೋಮುವಾದ ಸೃಷ್ಟಿಸಿದೆ.

ನಮ್ಮಲ್ಲಿ ಸಂವಿಧಾನ, ಕಾನೂನು ಎಲ್ಲ ಇದ್ದರೂ ಕೋಮುವಾದದ ದೃಷ್ಟಿಯಲ್ಲಿ ಅಲ್ಪಸಂಖ್ಯಾತರು ಕನಿಷ್ಠ ಬದುಕುವ ಹಕ್ಕಿಗೂ ಅನರ್ಹರಾಗಿ ಕಂಡುಬರುತ್ತಾರೆ. ನಾವು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ, ಕಡಿಮೆ ಸಂಖ್ಯೆಯಲ್ಲಿರುವ ನೀವು ನಾವು ಹೇಳಿದಂತೆ ಕೇಳಬೇಕೆಂಬುದು ಅದರ ದುಂಡಾವರ್ತಿ ವಾದ. ಕೋಮುವಾದದ ಇಂಥ ಜೀವವಿರೋಧಿ ಸಿದ್ಧಾಂತವನ್ನು ರಾಜಶೇಖರ್ ರವರು "ಕುರಿ–ತೋಳಗಳ ಜಗಳದಲ್ಲಿ ತೋಳದ ಪರವಾಗಿ ನಿಲ್ಲುವ ಅರಣ್ಯನ್ಯಾಯ" ('ಬಹುವಚನ ಭಾರತ',ಪುಟ–೮೯)ಕ್ಕೆ ಹೋಲಿಸುತ್ತಾರೆ.

ರಾಜಶೇಖರ್ ರವರು ಕೇವಲ ಹಿಂದೂ ಕೋಮುವಾದವನ್ನು ಮಾತ್ರ ಇಟ್ಟುಕೊಂಡು ಚಿಂತಿಸಿದವರಲ್ಲ. ಮುಸ್ಲಿಂ ಕೋಮುವಾದ ಸೃಷ್ಟಿಸಿರುವ ಅಪಾಯಗಳ ಬಗ್ಗೆಯೂ ಅವರು ಆತಂಕಿತರಾಗುತ್ತಾರೆ. ಜಾಗತಿಕವಾಗಿ ಅಮೇರಿಕ, ಇಂಗ್ಲೆಂಡ್ ಮತ್ತು ಫ್ರಾನ್ಸ್ಗಳ ಕುಮ್ಮಕ್ಕಿನಿಂದ ತೃತೀಯ ಜಗತ್ತಿನ ನೆಮ್ಮದಿ ಹಾಳು ಮಾಡಿರುವುದು ಮುಸ್ಲಿಂ ಕೋಮುವಾದ ಎಂದೇ ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಮುಸ್ಲಿಂಕೋಮುವಾದಕ್ಕೆ ಅಮೇರಿಕ ತನ್ನ ಮಿಲಿಟರಿ ಬಲ ಮತ್ತು ಮಿಲಿಟರಿ ಕಾರ್ಯಾಚರಣೆಗಳಿಂದ ಉಂಟು ಮಾಡಿರುವ ಸಾವು ನೋವುಗಳನ್ನು ಹೋಲಿಸಿದಾಗ ಅಮೇರಿಕದ ಸಾಮ್ರಾಜ್ಯಶಾಹಿನೀತಿಯಿಂದ ದಮನಗೊಂಡಿರುವ ನಾಗರಿಕ ಹಕ್ಕುಗಳ ಬಗ್ಗೆ ಎಂಥವರಿಗಾದರೂ ಗಾಬರಿಯಾಗುತ್ತದೆ. ಈ ನಿಟ್ಟಿನಲ್ಲಿ ಅಮೇರಿಕ ರಕ್ಷಣೆಗಾಗಿ ಮಾಡುವ ವೆಚ್ಚವನ್ನೊಮ್ಮೆ ನಾವು ನೋಡಿದರೆ ಇದು ಮನದಟ್ಟಾಗಬಹುದು.

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಅಲ್ಪಸಂಖ್ಯಾತರುಗಳು ಅನುಭವಿಸುತ್ತಿರುವ ಮಾನಸಿಕ ವೇದನೆ ದಾರುಣವಾದುದು. ಭಾರತದ ಮುಸ್ಲಿಂರು, ಕಾಶ್ಮೀರದ ಪಂಡಿತರು, ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿರುವ ಹಿಂದೂಗಳು, ಪ್ಯಾಲಿಸ್ತೇನಿನ ಯಹೂದಿಗಳು ಚರಿತ್ರೆಯಲ್ಲಿ ಆಗಿ ಹೋದ ಗಾಯಗಳ ಭಾರವನ್ನು ವರ್ತಮಾನದಲ್ಲಿ ಜೀವಿಸುತ್ತಿರುವ ಅವರುಗಳು ಹೊರಬೇಕಿದೆ. ಎಂದು ರಹಮತ್ ತರೀಕೆರೆಯವರು ತಮ್ಮ 'ಧರ್ಮಪರೀಕ್ಷೆ'ಯಲ್ಲಿ ಕೋಮುವಾದ ದೇಶಕಾಲಾತೀತವಾಗಿ ಏಕರೂಪಿಸಾಮ್ಯತೆಯನ್ನು ಹೊಂದಿರುವುದನ್ನು ವಿಶದೀಕರಿಸಿದ್ದಾರೆ. ಮತೀಯವಾದ ಚರಿತ್ರೆಯಲ್ಲಿ ಆಗಿಹೋದ ಗುಣಾತ್ಮಕ ಅಂಶಗಳ ಮೇಲೆ ವಿಸ್ಮೃತಿಯ ಪರದೆ ಎಳೆದು

ತನಗೆ ಬೇಕಾದ ಸ್ವನುಕೂಲಿ ಅಂಶಗಳನ್ನೆ ಮುನ್ನೆಲೆಗೆ ತರುತ್ತದೆ. ಸುಳ್ಳುಗಳನ್ನು ಪದೆ ಪದೆ ಪುನರುಚ್ಚರಿಸಿ ಮಿಥ್ಯಸಂಕಥನಗಳನ್ನು ಕಟ್ಟಿ ನಂಬುವಂತೆ ಮಾಡುತ್ತದೆ. ಈ ಸುಳ್ಳುಗಳನ್ನು ನಂಬುವಂತೆ ಮಾಡಲು ಅದು ಎಲ್ಲ ಬೌದ್ಧಿಕ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ ಹಿಡಿತ ಸಾಧಿಸಲು ಹವಣಿಸುತ್ತದೆ. ಬುದ್ಧಿಜೀವಿಗಳ ಮೇಲೆ ಹಲ್ಲೆ ನಡೆಸುತ್ತದೆ. ವಾಸ್ತವಾಂಶಗಳನ್ನು ತಿರುಚಿ ತಮ್ಮ ಸಿದ್ಧಾಂತಗಳಿಗೆ ಅನುಗುಣವಾದ ಮಾಹಿತಿಯನ್ನು ಪೋಣಿಸುತ್ತದೆ. ಆ ಮೂಲಕ ತನ್ನ ಅಧಿಕಾರವನ್ನು ಅದು ಸ್ಥಾಪಿಸಿಕೊಳ್ಳುತ್ತದೆ. ಇದನ್ನು ಸ್ಪಷ್ಟವಾಗಿ ಗುರುತಿಸುವ ರಾಜಶೇಖರ್ ರವರು ಜಾಗತಿಕವಾಗಿ ಹಬ್ಬಿರುವ ಕೋಮುವಾದದ ಕರಾಳ ಮುಖಗಳ ಹಿಂದೆ ಯುರೋಪ್ ಮತ್ತು ಅಮೇರಿಕಗಳ ಪಾತ್ರವಿರುವುದನ್ನು ನಿಚ್ಚಳವಾಗಿ ಗುರುತಿಸಿದ್ದಾರೆ.

ಆಧುನಿಕ ಕಾಲಘಟ್ಟದಲ್ಲಿ ಜಿ.ರಾಜಶೇಖರ್ ರವರು ಕೋಮುವಾದವನ್ನು ವಿಭಿನ್ನ ದೃಷ್ಟಿಕೋನಗಳಿಂದ ಒರೆಗೆ ಹಚ್ಚಿದವರು. ಅವರ ನೇರ ಹಾಗೂ ನಿಷ್ಠುರ ವಿಶ್ಲೇಷಣೆಗಳಲ್ಲಿ ಸಮಾಜವಾದಿ ಮತ್ತು ಮಾನವತಾವಾದಿ ನಿಲುವುಗಳನ್ನು ಕಾಣಬಹುದು. ಅವರ ಚಿಂತನೆಗಳಿಗೆ ಮಾರ್ಕ್ಸ್ ಚಿಂತನೆಗಳು ಒತ್ತಾಸೆಯಾಗಿದ್ದರೂ ಜಗತ್ತನ್ನಾಳಿರುವ ಕಮ್ಯುನಿಸ್ಟ್ ಪಕ್ಷಗಳ ಆತ್ಮವಂಚಕ ಪ್ರವೃತ್ತಿಯನ್ನೂ ವಿಮರ್ಶೆಗೊಳಪಡಿಸುತ್ತಾರೆ.

ಒಟ್ಟಿನಲ್ಲಿ ರಾಜಶೇಖರ್ರವರ ಕೋಮುವಾದದ ಚಿಂತನೆಯ ನೆಲೆಗಳಲ್ಲಿ ನೋಡುವುದಾದರೆ ಫ್ಯಾಸಿಸ್ಟ್ ಧೋರಣೆಯಲ್ಲಿನ ಈ ಹಿಂಸೆಯ ಹಿಂದೆ ನಾವೂ ಇದ್ದೇವೆ. ಬೇಕೆಂದರೆ ನಗರದ ವಿದ್ಯಾವಂತ ಮಧ್ಯಮವರ್ಗವೂ ಸೇರಿದಂತೆ ದಲಿತ, ಶೂದ್ರ ವರ್ಗಗಳೂ ಕೋಮುವಾದವನ್ನು ಅಂಗೀಕರಿಸುತ್ತ ಕೋಮುವಾದಿಗಳನ್ನು ತಮಗೆ ಗೊತ್ತಿಲ್ಲದಂತೆಯೆ ಗೌರವಿಸುತ್ತಿರುವುದನ್ನು ನಾವು ನೋಡಬಹುದಾಗಿದೆ. ಆದ್ದರಿಂದಲೆ ರಾಜಶೇಖರ್ ರವರು ಜೀನ್ ಪಾಲ್ ಸಾರ್ತ್ರೆ ಹಿಂಸೆಯನ್ನು ಕುರಿತು ತೀರ್ಮಾನಿಸುವ "ಹಿಟ್ಲರ್ನ ಹಿಂಸೆಗೆ ನಾನೂ ಜವಬ್ಧಾರ"('ಬಹುವಚನ ಭಾರತ', ಪುಟ–೭೭) ಎಂಬ ವ್ಯಾಖ್ಯಾನವನ್ನು ಒತ್ತಿ ಹೇಳುತ್ತಾರೆ. ಭಾರತದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಪ್ರಬಲವಾಗಿ ಬೆಳೆದು ಶಾಂತಿ ಕದಡುತ್ತಿರುವುದಕ್ಕೆ ನಾವೂ ಜವಬ್ದಾರರಾಗಬೇಕಿದೆ ಎಂಬುದನ್ನು ನಾವು ಈ ಹಿನ್ನೆಲೆಯಲ್ಲಿಯೆ ಗ್ರಹಿಸಬೇಕಾಗುತ್ತದೆ.

## ಆಧಾರ ಗ್ರಂಥಗಳು


೧. ಜಿ.ರಾಜಶೇಖರ, 'ಬಹುವಚನ ಭಾರತ', ಅಭಿನವ ಪ್ರಕಾಶನ,ಬೆಂಗಳೂರು, ೨೦೧೯

೨. ಎಸ್.ಆರ್. ಭಟ್, ಜಿ.ರಾಜಶೇಖರ್, ಕೆ.ಫಣಿರಾಜ್, 'ಕೋಮುವಾದದ ಕರಾಳ ಮುಖಗಳು', ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨

೩. ಜಿ.ರಾಜಶೇಖರ, 'ಕಾಗೋಡು ಸತ್ಯಾಗ್ರಹ', ಇ–ಬುಕ್, ಋತುಮಾನ

೪. ರಹಮತ್ ತರೀಕೆರೆ,ಸಂದರ್ಶನ, 'ನ್ಯಾಯನಿಷ್ಠುರಿಗಳ ಜತೆಯಲ್ಲಿ' ಅಭಿನವ ಪ್ರಕಾಶನ, ಬೆಂಗಳೂರು,೨೦೧೯

೫. ರಹಮತ್ ತರೀಕೆರೆ, 'ನೆತ್ತರ ಸೂತಕ' ಅಭಿನವ ಪ್ರಕಾಶನ, ಬೆಂಗಳೂರು, ೨೦೦೮

೬. ರಹಮತ್ ತರೀಕೆರೆ, ಧರ್ಮಪರೀಕ್ಷೆ' ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೦

೭. ನೀನಾಸಂ, 'ಮಾತುಕತೆ', ವಿವಿಧ ಸಂಚಿಕೆಗಳು